# ಮೈಸೂರ ಗೆಜೆಟ್.

ನಂ. 1. ಸರ್ಕಾರದಿಂದ ಘಾಯಿಷ್ ಆದ್ದು. ಸೇ 1877.

ಬೆಂಗಳೂರು, ಶನಿವಾರ, ಜನವರೀ ತಾ| 6, ಸೇ 1877.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

## ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ವ ಕೊಡಗು ಚೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆಗಳು, ಇಂಡ್ಯ ಗವರ್ಮೆಂಟನವರ ಇಸ್ತಿಹಾರ್ ನಾಮೆಗಳು. .. .. .. .. ಪುಟ 1—6

2ನೇ ಭಾಗ–ಜುಡಿಷಲ್ ಕಮ್ಮಿಷನರು, ಸರ್ವೇ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್ಟಿಂಡೆಂಟರು, ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್ಲವರು, ಮಣಿ ಆರ್ಡರ್ ಕಂಟ್ರೋಲರು, ಪಬ್ಲಿಕ್ ವರ್ಕಸ ಆಫಿಸರ್‌ಗಳು, ಮಿಲಿಟರಿ ಅಸಿಸ್ಟೆಂಟರು, ರಿಜಿಸ್ಟ್ರೇರ್ ಇನ್‌ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಫಾರೆಸ್ಟ್ ಕರ್ಸರ್‌ವೇಟರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿವಿಜ್ ಜಾತ್ ಕಮ್ಮಿಷನರುಗಳು, ಡಿ| ಡೆಪ್ಯುಟಿ ಕಮ್ಮಿಷನರುಗಳು, ಪೊಲೀಸ್ ಸೂಪರ್ಟಿಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸುಗಳು. .. 1—10

3ನೇ ಭಾಗ–ಇಂಡ್ಯ ಗವರ್ಮೆಂಟಿನ ಮಂತ್ರಾಲೋಚಕ ಸಭೆಯವರ ಆಕ್ಟುಗಳು. .. .. 1— 6

4ನೇ ಭಾಗ–ಚಿಲ್ಲರೆ ವಿಷಯಗಳ ಕಾಗದ ಪತ್ರಗಳು.— .. ..

ಸ್ಟೇಟ್‌ಮೆಂಟ್—ವೃತ್ತನಿಬಂಧನೆ—ಅರವ, ಹಿಂದುಸ್ತಾನಿ. .. .. ..

## 1ನೇ ಭಾಗ.

### ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

### ಜನರಲ್.

ಇಸ್ತಿಹಾರ್ ನಾಮೆಗಳು.

ನಂ. 335. ತಾರೀಖು 16ನೇ ಡಿಸೆಂಬರ್ 1876.

* ರೈತರಿಂದ ಬಟಾಯಿಯಲ್ಲಿ ಸಾಗುವಳಿ ಮಾಡಲ್ಪಡುವ ಜಮೀನ ಹುಟ್ಟುವಳಿಯಲ್ಲಿ ಸರಕಾರದ ಹಿಸ್ಸೆಗೆ ಬೆಲೇ ಕಟ್ಟುತಕ್ಕ ಬಗ್ಯೂ ಅದನ್ನು ಬಿಕರೀ ಮಾಡತಕ್ಕ ಬಗ್ಯೂ ಯೇರ್ಪಡಿಸಲ್ಪಟ್ಟ ಮಿದರಡಿ ನಮೂದಿಸಲ್ಪಡುವ ನಿಬಂಧನೆಗಳು ಸರ್ವರ ತಿಳುವಳಿಕೆ ಬಗ್ಯೆ ಘಾಯಿಷ್ ಮಾಡಲ್ಪಡತಕ್ಕದ್ದೆಂದು ಚೀಫ್ ಕಮ್ಮಿಷನರ್ ಸಾಹೆಬರವರು ಅಪ್ಪಣೆ ಕೊಡಿಸುತ್ತಾರೆ.

## ನಿಬಂಧನೆಗಳು.

ಬಟಾಯಿ ಪದ್ಧತಿಯೊಂದಿಗೆ ಕೂಡಿರತಕ್ಕ ಅಕ್ರಮಗಳನ್ನು ಅಡ್ಡಿಪಡಿಸುವಕ್ಕ ಉದ್ದೇಶದೊಡನೆ ಮತ್ತು ಕ್ರಮೇಣ ಬಟಾಯಿ ಜಮ್ಮಿಗಳು ಕಂದಾಯಕ್ಕೆ ಮೊಕರರ್ ಆಗುವ ವರಿಗೂ, ಬಟಾಯಿಯಲ್ಲಿ ಮಾಡಲ್ಪಟ್ಟ ತರೀ ಫಸಲ್‌ನಲ್ಲಿ ಸರಕಾರ ಹಿಸ್ಸೆಗೆ ಜೆಲೆಕ ಟ್ಟತಕ್ಕ ಬಗ್ಯೂ ಅವನ್ನು ಬಿಕರೀ ಮಾಡತಕ್ಕ ಬಗ್ಯೂ ಯೇರ್ಪಡಿಸಲ್ಪಟ್ಟ ವಿವರಣೆ ಬರುವ ನಿಬಂಧನೆಗಳು ಸರ್ವರ ತಿಳುವಳಿಕೆ ಬಗ್ಯೆ ಘಾಯಿಷ್ ಮಾಡಲ್ಪಟ್ಟಿವೆ.

1. ಬಟಾಯಿ ಪಡಂಬಡಿಕೆ ಮೇಲೆ ಸಾಗುವಳಿಗೆ ಅಪ್ಪಣೆ ಕೊಡಲ್ಪಟ್ಟ ದರೋಜಸ್ತು ಸಂಗತಿಗಳಲ್ಲಿಯೂ ಪ್ರತಿ ಕೆರೆ ಕೆಳಗೆ ಬೀಜಪೇರಾವಾದ ಜಮ್ಮಿನಿನ ವಾಜಬೀ ಬೀಜವರಿಯು ಶ್ಯಾನುಭೋಗನಿಂದ ಪೈವಯಿಷೀ ಮಾಡಿಸುವವರ ಮೂಲಕ ಕರಾರು ವಾಕಾ ತಿಳಿಯಲ್ಪಟ್ಟು A (ಎ.) ನಮೂನೆಯಲ್ಲಿ ಪೊಂದು ರಿಪೋರ್ಟು ಪಟೇಲನಿಂದಲೂ, ಕೇಕದಾರನಿಂದಲೂ, ಅಡ್ಡರುಜು ಮಾಡಲ್ಪಟ್ಟು ಬೀಜಪೇರಾವ್ ತಾರೀಖಿನಿಂದ 14 ದಿನಗಳೊಳಗಾಗಿ ಅಮಲ್ದಾರ್ರವರಿಗೆ ಕಳುಹಿಸಲ್ಪಡತಕ್ಕದ್ದು.

2. ಕೆರೆ ಕೆಳಗೆ ಸಾಗುವಳಿ ಮಾಡಲ್ಪಟ್ಟ ಜಮ್ಮಿ 5 ಖಂಡಗಕ್ಕಿಂತ್ತೂ ಕಮ್ಮಿಯಿರುವ ಸಂಗತಿಗಳಲ್ಲಿ ನಿಲುವು ಬೆಳೆ ಪಕ್ವಕ್ಕೆ ಬರುವ ತರುಣದಲ್ಲಿ ಅಂದರೆ 4 ತಿಂಗಳ ಬೆಳೆ ಆದಾಗ ಅದರ ಬೆಲೆ ಮೂತಲಿ ಪಂಚಾಯಿತರ ಸಹಾಯದೊಡನೆ ಶ್ಯಾನುಭೋಗನಿಂದಲೂ ಪಟೇಲನಿಂದಲೂ ಅಂದಾಜು ಕಟ್ಟಲ್ಪಟ್ಟು ಸದರೀ ಅಂದಾಜು ಪಟ್ಟಿಯು B (ಬಿ.) ನಮೂನೆಯಲ್ಲಿ ಕೇಕದಾರಿಂದ ಅವರು ಬರಿಯಲಿಚ್ಛೈಯಿಸುವ ಯಾವ ಪದಾಗಳನ್ನಿ ಅಡ್ಡರುಜು ಮಾಡಲ್ಪಟ್ಟ ಬಳಿಕ ಅಮಲ್ದಾರ್ರವರಿಗೆ ಕಳುಹಿಸಲ್ಪಡತಕ್ಕದ್ದು.

3. ಅಂದಾಜುಪಟ್ಟಿಯು ಕಳುಹಿಸಲ್ಪಟ್ಟ ಮೇಲೆ ಅದು ತಾಲ್ಲೂಕು ಕಛೇರಿಯಲ್ಲಿ ಪರಿಶೋಧಿಸಲ್ಪಟ್ಟು ತದನಂತರ ಅಮಲ್ದಾರರು, ಪರಾಜೆಕಾಲವನ್ನ ಳಗೆ, ಸಾಗುವಳೀ ಆಗಿರತಕ್ಕ ಜಮ್ಮಿ ಬೀಜವರಿ, ಫಸಲ್ ಪೈಕೀ ಸರಕಾರದ ಹಿಸ್ಸೆಯ ಅಂದಾಜು ಜಿಲೆ ಮತ್ತು ಹರಾಜ್ ನಿಬಂಧನೆಗಳು ಮತ್ತು ಬೀಜವರಿ ಯಾ ಪೈ ಅಂದಾಜು ಕರಾರುವಾಕಾ ಯಿರುವ ಬಗ್ಯೆ ಸರಕಾರದವರು ಜವಾಬ್ದಾರರಲ್ಲವೆಂದುನ್ನು ಮತ್ತು ಅಂದಾಜು ಕರಾರುವಾಕಾ ಅದಲ್ಲವೆಂದು ಎಂಬ ನಿಮಿತ್ತದ ಮೇಲೆ ಮುಜರಬಗ್ಯೆ ಯಾವ ದಾವೆಯನ್ನೂ ಅಂಗೀಕರಿಸುವ ದಿಲ್ಲವೆಂದುನ್ನು ಪೊಂದು ಕಲಂ, ಯಿವುಗಳನ್ನು ನಮೂದಿಸಿ ಪೊಂದು ಹರಾಜ್ ಇಸ್ತಿಹಾರ್ ಕೊಡತಕ್ಕದ್ದು. ಬೆಳೆ ಮಾರಲ್ಪಡತಕ್ಕ ಸ್ಥಳದಲ್ಲಿಯು, ಬಟಾಯಿ ಜಮ್ಮಿ ಯಾವ ಗ್ರಾಮಕ್ಕೆ ಸೇರಿಯಿರುತ್ತೋ ಆ ಗ್ರಾಮದಲ್ಲಿಯೂ ಅಸ್‌ಪಾಸ್ ಗ್ರಾಮಗಳಲ್ಲಿಯೂ ತಾಲ್ಲೂಕು ಕಸಬೆಯಲ್ಲಿಯೂ ಅಜೂಬಾಜು ತಾಲ್ಲೂಕುಗಳ ಸಬೆಗಳಲ್ಲಿಯೂ ಸದರೀ ಇಸ್ತಿಹಾರ್ ದಂಡೋರೆ ಮೂಲಕ ಪ್ರಸಿದ್ಧಪಡಿಸಲ್ಪಡತಕ್ಕದ್ದು. ಮತ್ತು ಬರಹದಲ್ಲಿ ಪೊಂದು ನೋಟೀಸ್ ಗ್ರಾಮದ ಪೊಲೀಸ್ ಚಾವಡಿಯಲ್ಲಿ ಚಿಕಟ್ಟುಯಿಸಲ್ಪಡತಕ್ಕದ್ದಲ್ಲದೆ ತಾಲ್ಲೂಕು ಕಛೇರಿಯಲ್ಲಿ ಬಹಿರಂಗವಾದ ಜಾಗಾದಲ್ಲಿ ಸಹಾ ಚಿಕಟ್ಟುಯಿಸಲ್ಪಡತಕ್ಕದ್ದು.

4. ಮೇಲೆ ತಿಳಿಸಲ್ಪಟ್ಟ ಪ್ರಕಾರ ಪೊಂದು ಇಸ್ತಿಹಾರ್ ಘಾಯಿಷ್ ಮಾಡಲ್ಪಟ್ಟ ತಾರೀಖು ಲಗಾಯತು ಅಧವು ಪಕ್ಷ 15 ದಿನಗಳು ಕಳದು ಹೋಗುವ ಪರಿಯಂತ ಹರಾಜು ನಡಿಸಲ್ಪಡ ಕೂಡದು.

5. ಹರಾಜಿಗೆ ಗೊತ್ತಾದ ದಿನ ಅಮಲ್ದಾರ್ರಾಗಲಿ ಶಿರಸ್ತೇದಾರರಾಗಲಿ, ಸೇವ್ಹಾರರಾಗಲಿ, ಅಬಗ್ಯೆ ಡಿಪ್ಯೂಟಿ ಕಮ್ಮಿಷನರ್ ಯವರಿಂದ ಅಧಿಕಾರ ಕೊಡಲ್ಪಡುವ ತಾಲ್ಲೂಕಿನ ಇತರ ಯಾವ ಉದ್ಯೋಗಸ್ಥನಾಗಲಿ ಹರಾಜು ಸ್ಥಳಕ್ಕೆ ಹೋಗಿ ನಿಲುವು ಬೆಳೆ ಪೈಕೀ ಸರಕಾರದ ಹಿಸ್ಸೆಗೆ, ಅರ್ಜ ಬಾಜಾರ ನಿರಖಿಗೆ ಕೇಕಡಾ 10ರ ಪ್ರಕಾರ ಕಮ್ಮಿಯಿಂದ ಅವ್ವಲ್ ಬೆಲೆ ತರಾಯಿಸಿ ಹರಾಜು ಹಾಕಿಸತಕ್ಕದ್ದು. ಫಸಲು ಛಡದರಖಾಸ್ತುದಾರನಿಗೆ ಬಿಡಲ್ಪಡತಕ್ಕದ್ದು, ಮತ್ತು ಆತನ ದರಖಾಸ್ತಿ ಪೊಬಲಗ್ ಪೈಕಿ ಕೇಕಡಾ 25 ರೂಪಾಯಿ ಪ್ರಕಾರ ಕೂಡ್ಲೆ ಕೇವಣಿ ಕಟ್ಟತಕ್ಕದ್ದೆಂದು ಆತನಿಗೆ ಆಜ್ಞಾಪಿಸತಕ್ಕದ್ದು. ಹಾಗೆ ಕೇವಣಿ ಪೊಲಗ್ ಕೊಡಲಿಕ್ಕೆ ತಪ್ಪಿದರೆ ಆ ಸ್ವತ್ತು ಪುನಶ್ಚ ಕೂಡ್ಲೆ ಹರಾಜು ಮಾಡಲ್ಪಟ್ಟು ಅವ್ವಲ್ ಖರೀದೀದಾರನ ಅವಗುಣಕ್ಕೆ ಪುನಶ್ಚ ವಿಕ್ರಯಿಸಲ್ಪಡತಕ್ಕದ್ದು. ಹರಾಜಿನಲ್ಲಿ ದರಖಾಸ್ತುದಾರರು ಯಾರು ಯಿಲ್ಲದೆಯೂ ಅಥವಾ ಸರಿಯಾದ ಮೊಬಲಗಿಗೆ ದರಖಾಸ್ತು ಬಾರದೆಯೂ ಯಿರುವ ಸಂಗತಿಗಳಲ್ಲಿ 2 ವ 3ನೇ ನಿಬಂಧನೆಗಳಿಂದ ವಿಧಿಸಲ್ಪಟ್ಟ ಪ್ರಥಮ ಕ್ರಮಗಳನ್ನು ಪುನಶ್ಚ ಅವಲಂಬಿಸತಕ್ಕದ್ದು. ಅಂತಾ ನಡವಳಿತದ ದೆಸೆಇಂದ ಉಂಟಾಗುವ ನಷ್ಟವನ್ನು ರೈತನ ಯಾ ಸರಕಾರದ ಪ್ರಯೋಜನಗಳಿಗೆ ಹಾನಿಕರವಾಗಿರುವ ಪಕ್ಷದಲ್ಲಿ, ಆ ಫಸಲು ಸರಕಾರ ಉದ್ಯೋಗಸ್ತರಿಂದ ಕಟಾವು ಮತ್ತು ಮೋಲೀಸ್ತು ಮಾಡಿಸಲ್ಪಟ್ಟು ಆ ಪೈಕಿ ಸರಕಾರ ಹಿಸ್ಸೆಯು ಅಮಲ್ದಾರರ ಯಾ ಡಿಪ್ಯೂಟಿ ಕಮ್ಮಿಷನರವರ ಹುಕ್ಕುಂ ಮೇರೆ ಕೇಕದಾರನಿಂದ ವಿಕ್ರಯಿಸಲ್ಪಡತಕ್ಕದ್ದು. ಪ್ರತಿ ಸಂಗತಿಯಲ್ಲಿಯೂ ನಡದ ಹರಾಜು ತಪಶೀಲ್‌ಗಳು B. ನಮೂನೆಯಲ್ಲಿ ಬರಿಯಲ್ಪಡತಕ್ಕದ್ದು. ಸದರೀ ಬಗ್ಯೆ B. ನಮೂನೆಯನ್ನು ತಾಲ್ಲೂಕಿನಿಂದ ತೆಗದುಕ್ಕೊಂಡು ಪುನಶ್ಚ ಅಮಲ್ದಾರ್ರವರಿಗೆ ಕಳಿಹಿಸತಕ್ಕದ್ದು.

6. ಮೇಲಿನ ಸೆಕ್ಷನ್ನಲ್ಲಿ ನಿಬಂಧಿಸಲ್ಪಟ್ಟ ಪ್ರಕಾರ ಮಂಜೂರಾದ ದರಖಾಸ್ತುದಾರನಿಂದ ಕೇವಣೀ ಪೊಬಲಗ್ ಪೂರ್ತೀ ಆದಮೇಲೆ ಹರಾಜು ನಡಿಸುವ ಆಫೀಸರರು ಆ ಪೊಬಲಗಿಗೆ ಪೊಂದು ರಸೀದಿಯನ್ನು ಕೊಡತಕ್ಕದ್ದು. ಮತ್ತು ಖರೀದಿ ಪೊಬಲಗ್ ಪೈಕಿ ಉಳಿದ ಬಾಕಿಯನ್ನು ಖರೀದೀದಾರ ಈ ಕೆಳಗೆ ನಮೂದಿಸಲ್ಪಟ್ಟ ಕಂತುಬಂದಿಗಳ ಪ್ರಕಾರ ಪಾವತಿ ಮಾಡುತ್ತಾ ಬಂದಲ್ಲಿ ಆ ಹರಾಜು ಪೂರ್ತಿಯನ್ನು ಹೊಂದುವದು.

97.

9. ಈ ಹುಕ್ಕುಂಗಳು ತಲಪಿದಕೂಡ್ಲೆ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್‌ಗಳು, ಪ್ರಬಲವಾದ ಸಂಕಟ ಉಂಟಾಗಿರುವಂತೆ ತಿಳಿಯಬರುವ ಪ್ರತಿ ತಾಲ್ಲೂಕ ಅಮಲ್ದಾರ, ವಶದಲ್ಲಿ, ಆಯಾ ತಾಲ್ಲೂಕಿನ ಸ್ಥಿತಿಗೆ ತಕ್ಕಂತೆ ಪೂರ್ವವೇ ಡಿಸ್ಟ್ರಿಕ್ಟಿಗೆ ಕೊಡಲ್ಪಟ್ಟಿರುವ ರಿಲೀವ್ ಫಂಡ್‌ಗಳಿಂದ 50 ಯಾ 100 ರೂಪಾಯಿಗಳನ್ನು ಕೊಡತಕ್ಕದ್ದು. ಏಮಿಂದ ಸಂಭವಿಸುವ ಜರೂರೀಯಾತಿನ ಬಗ್ಯೆ, ಯಾವ ತಾಲ್ಲೂಕಿಗೆ ಯಾಗಿನ ಯೇರ್ಪಾಡು ಲಗಾವಾಗಿರು ತ್ತೋ ಅಂತಾ ಪ್ರತಿ ತಾಲ್ಲೂಕಿಗೂ, ತಾಲ್ಲೂಕು ಕಸಬೇಗಳಲ್ಲಿ ಕ್ಷಾಮ ನಿವಾರಣಾರ್ಥ ಪಾಕಣಾಲೆಗಳ ಸಂರಕ್ಷಣೆಯ ಬಗ್ಗೆ ಕೊಡಲ್ಪಟ್ಟಿರಬಹುದಾದ ವೊಬಲಗಿಗೆ ಜಾಸ್ತೀಯಾಗಿ ಹೆಚ್ಚಿಗೆ ವೊಬಲಗ್ ಮಂಜೂರ್ ಮಾಡಲಿಕ್ಕೆ ಚೀಫ್ ಕಮ್ಮಿಷನರ್ ಸಾಹೆಬರವರು ಸನ್ನದ್ಧರಾಗಿರುವರು.

10. ಯಾವ ತಾಲ್ಲೂಕುಗಳಿಗೆ ಈ ಕ್ರಮಗಳು ಲಗಾವ್ ಮಾಡಲ್ಪಟ್ಟಿರುತವೋ, ಮತ್ತು ಯಿವುಗಳನ್ನು ಜಾರೀ ಮಾಡಲಿಕ್ಕೋಸ್ಕರ ತಕ್ಕ ಏರ್ಪಾಡುಗಳು ಮಾಡಲ್ಪಟ್ಟಿವೆಯೋ ಅಂತಾ ತಾಲ್ಲೂಕುಗಳನ್ನು ವಿವರಿಸಿ ಅನುಕೂಲಿಸಿದಷ್ಟು ಕ್ಷಿಪ್ರದಲ್ಲಿ ರಿಪೋರ್ಟುಗಳನ್ನು ಕಳುಹಿಸಿ ಕೊಡುವಂತೆ ಡಿವೀಜ್ಞ ಜಾತ್ ಕಮ್ಮಿಷನರ್‌ಗಳು ಕೇಳ್ಪಟ್ಟಿರುತ್ತಾರೆ. ತಾಲ್ಲೂಕು ಜಾತ್ ಕ್ಷಾಮ ನಿವಾರಕ ಕೆಲಸಗಳು ನಡೆಯುವ ಮುಖ್ಯ ಮುಖ್ಯ ಸ್ಥಳಗಳ ಮೇಲ್ ವಿಚಾರಣೆ ಕೆಲಸದಲ್ಲಿ ಸಹಾಯ ಮಾಡಲಿಕ್ಕೋಸ್ಕರ ಮ್ಯುನಿಸಿಫ್‌ಗಳನ್ನು ಕುಮ್ಮಕ್ಕ ತೆಗದುಕೊಳ್ಳ ಬಹುದೆಂದು ಚೀಫ್ ಕಮ್ಮಿಷನರ್ ಸಾಹೆಬರವರು ಎಣಿಸುತ್ತಾರೆ. ಮುಂದೆ ಸಾಲ್ ಬಸಾಲ್ ಕೋರ್ಟು ವೋಕಳೇ ವುಂಟು ಮಾಡುವ ಉದ್ದೇಶದಿಂದ ಅವರುಗಳಿಗೆ ಸಿವಿಲ್ ಕೆಲಸವನ್ನು ಕೂಡ್ಲೇ ತಪ್ಪಿಸ ಬಹುದು. ಸದರೀ ಮ್ಯುನಸಫರು, ತಮ್ಮ ಸಿವಿಲ್ ಅಧಿಕಾರಕ್ಕೆ ಒಳಪಟ್ಟ ಆಯಾ ತಾಲ್ಲೂಕಿನ ಅಮಲ್ದಾರರೊಡನೆ ಸೇರಿ ಕೆಲಸ ನಡಿಸುವಂತೆ ಹುಕ್ಕುಂ ಮಾಡಲ್ಪಡತಕ್ಕದ್ದು.

11. ಈ ಕೆಲಸಗಳ ಉತ್ತಮವಾದ ಮೇಲ್ ವಿಚಾರಣೆಯು ಮೊಕರರ್ ಮಾಡಲ್ಪಡಬಹುದಾದ ಸಬ್ ಡಿವೀಜ್ಞ ವ ಇತರ ಸ್ಪೆಷಲ್ ಆಫಿಸರ್‌ಗಳಿಂದ ಮರಳಿ ನಡಿಸಲ್ಪಡುವದು.

12. ಡೆಪ್ಯುಟಿ ಕಮ್ಮಿಷನರ್‌ಗಳ ಲಗಾಯತ್ ಗ್ರಾಮ ಪಟೇಲರ ವರಿಗೆ ಈ ಸರ್ಕಾರಕ್ಕೆ ಸೇರಿದ ದರೋಬಸ್ತು ಉದ್ಯೋಗಸ್ಥರಿಗೂ, ಮೇಲೆ ಕಂಡ ಹುಕ್ಕುಂಗಳ ಸಾರವನ್ನು ಅನುಸರಿಸುವ ಬಗ್ಗೂ, ದೈವ ಸಂಕಲ್ಪದಿಂದ ನಿರೋಧಿಸ ಬಹುದಾದ ಪ್ರಾಣಾ ಪಾಯಗಳುಉಂಟಾಗದಂತೆ ನೋಡಿಕ್ಕೊಳ್ಳುವದೇ ಸರ್ಕಾರದವರ ಕರ್ತವ್ಯವೆಂದು ಸಂಪೂರ್ಣವಾಗಿ ತಿಳಿದು ಕ್ಷಾಮ ಸಂಕಟ ಪರಿಹಾರವನ್ನು ಅವಶ್ಯಕವಾಗಿ ಆಪೇಕ್ಷಿಸುವ ದರೋಬಸ್ತು ಜನಗಳ ಮೇಲೂ, ಖಂಡಿತವಾಗಿ ಉಸ್ತುವಾರೀ ಮಾಡುವ ಬಗ್ಯೂ, ಅವರುಗಳನ್ನು ಜವಾಬ್ದಾರರನ್ನಾಗಿ ಮಾಡತಕ್ಕದ್ದೆಂದು ಕಡೆಗೆ ಮೆಸ್ಟರ್ ಸಾಂಡರ್ಸ್ ಸಾಹೆಬರವರು ಸ್ಪಷ್ಟವಾಗಿ ತಿಳಿಸಲಪೇಕ್ಷಿಸುತ್ತಾರೆ.

"ಬವೋಜೀಬ್ ಹುಕ್ಕುಂ."

T. CLARKE,
*Offg. Secretary.*